**ಓ.ಎಸ್. ನಂ. 210/2022** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 27.6.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಕೆ.ಸಿ.ಎಸ್ ವಕೀಲರಿಂದಃ

ನಾನು ನನ್ನ ದಾವಪತ್ರದಲ್ಲಿ ಹೇಳಿರುವ ವಂಶವೃಕ್ಷವನ್ನು ತೋರಿಸುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವ 1 ನೇ ಐಟಂ ಆಸ್ತಿ ಮೂಲತಃ ನನ್ನ ತಂದೆಗೆ ಸೇರಿರುತ್ತದೆ. ಸರ್ವೆ ನಂ.5/1 ರ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿರುವುದಿಲ್ಲ. ದಾವ 1 ನೇ ಐಟಂ ಆಸ್ತಿ ನನ್ನ ತಂದೆಗೆ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ನನ್ನ ತಂದೆಯ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ದಾವ 2 ನೇ ಐಟಂ ಆಸ್ತಿ ನನ್ನ ತಂದೆಗೆ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯು ನನ್ನ ತಂದೆಯ ತಂದೆಯ ಹೆಸರಿನಲ್ಲಿತ್ತು. ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸರ್ವೆ ನಂ.6/2 ರ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರ ತಂದೆಯ ಸಹೋದರನ ಹೆಸರು ರಂಗ ಎಂದರೆ ಸರಿ. ದಾವ 2 ನೇ ಐಟಂ ಆಸ್ತಿಯನ್ನು ಸದರಿ ರಂಗ ರವರು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಂದೆ ಹಾಗೂ ರಂಗ ಸೇರಿ ಖರೀದಿ ಮಾಡಿರುತ್ತಾರೆ ಎನ್ನುವರು. ನನ್ನ ತಂದೆ ಮತ್ತು ರಂಗ ಸೇರಿ ಖರೀದಿ ಮಾಡಿರುತ್ತಾರೆ ಎಂದು ನನ್ನ ದಾವಪತ್ರದಲ್ಲಿ ಹೇಳಿರುವುದಿಲ್ಲ. ಆ ರೀತಿ ಖರೀದಿ ಮಾಡಿರುವುದರಿಂದ ದಾವ 2 ನೇ ಐಟಂ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುವುದಿಲ್ಲ ಎಂದರೆ ಸರಿ. ದಾವ 2 ನೇ ಐಟಂ ಆಸ್ತಿಯನ್ನು ಪ್ರತಿವಾದಿಯರು ಹಾಗೂ ಸದರಿ ರಂಗ ರವರ ಮಕ್ಕಳು ಸಮನಾಗಿ ಹಂಚಿಕೊಂಡಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರು ಬೇರೆಯವರ ಮನೆಯಲ್ಲಿ ಕೂಲಿ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ನಾನು ಸಹ ಕೂಲಿ ಮಾಡುತ್ತಿದ್ದೆ ಎನ್ನುವರು. ದಾವ 3 ನೇ ಐಟಂ ಆಸ್ತಿಯು ಮೂಲತಃ ಪಟೇಲ್ ಪುಟ್ಟಪ್ಪ ರವರಿಗೆ ಸೇರಿರುವ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತಿನಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ಪಟೇಲ್ ಪುಟ್ಟಪ್ಪ ರವರು ದಾವ 3 ನೇ ಐಟಂ ಆಸ್ತಿಗೆ ಸಂಬಂಧಿಸಿದಂತೆ 1 ಮತ್ತು 2 ನೇ ಪ್ರತಿವಾದಿಯರಿಗೆ ಯಾವುದೇ ನೊಂದಾಯಿತ ದಾಖಲೆ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರು ಸದರಿ ಪಟೇಲ್ ಪುಟ್ಟಪ್ಪ ರವರ ಮನೆಯಲ್ಲಿ ಜೀತ ಮಾಡಿಕೊಂಡಿದ್ದರಿಂದ ದಾವ 3 ನೇ ಐಟಂ ಆಸ್ತಿಯನ್ನು ಅವರಿಗೆ ಮುಪತ್ತಾಗಿ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಂದೆಗೆ ದಾವ 3 ನೇ ಐಟಂ ಆಸ್ತಿಯನ್ನು ನೀಡಿರುತ್ತಾರೆ ಎನ್ನುವರು. ನನ್ನ ತಂದೆ ಹೆಸರಿಗೆ 3 ನೇ ಐಟಂ ಆಸ್ತಿಯ ಯಾವುದೇ ದಾಖಲಾತಿಯಾಗಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ದಾವ 3 ನೇ ಐಟಂ ಆಸ್ತಿಯಲ್ಲಿ ಕಟ್ಟಿರುವ ಮನೆ ಹಳೆಯದಾಗಿರುತ್ತದೆ ಎಂದರೆ ಸರಿ. ಆ ಕಾರಣ ರಾಜೀವ ಗಾಂಧಿ ಗ್ರಾಮೀಣ ವಸತಿ ಯೋಜನೆಯಡಿ 3 ನೇ ಪ್ರತಿವಾದಿಯನ್ನು ಫಲಾನುಭವಿಯಾಗಿ ಆಯ್ಕೆ ಮಾಡಿ ಮನೆ ಕಟ್ಟಿಕೊಳ್ಳಲು ಆದೇಶವಾಗಿರುತ್ತದೆ ಎಂದರೆ ಸರಿ. 1 ಮತ್ತು

2 ನೇ ಪ್ರತಿವಾದಿಯರು ದಾವ 3 ನೇ ಐಟಂ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ.

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಯಾವುದೇ ದಾಖಲೆಗೆ ಸಹಿ ಮಾಡುವಾಗ ನೋಡಿ ಸಹಿ ಮಾಡುತ್ತೇನೆ ಎಂದರೆ ಸರಿ. ಲಂಕೆ ಗ್ರಾಮದ ಸರ್ವೆ ನಂ.13/3 ರ 1-34 ಎಕರೆ ಹಾಗೂ 36/ಪಿ29 ರ 4 ಎಕರೆ ಜಮೀನು ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಎರಡು ಜಮೀನುಗಳನ್ನು ನಾನು ಮತ್ತು ಕಾಳಮ್ಮ ಮೈಸೂರಿನ ಐ.ಸಿ.ಐ.ಸಿ.ಐ ಬ್ಯಾಂಕಿಗೆ ಆಧಾರ ಮಾಡಿ ಆಧಾರಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸಾಕ್ಷಿದಾರರು ನನ್ನ ಸೋದರ ಮಾವ ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎನ್ನುವರು. ಸದರಿ ಆಧಾರಪತ್ರದಲ್ಲಿರುವ ಪಕ್ಷಗಾರರ ಹೆಸರು ಮತ್ತು ವಿಳಾಸ ಸರಿಯಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಚನ್ನಯ್ಯ ಮತ್ತು ಕಾಳಮ್ಮ ರವರ ಮನೆಗೆ ದತ್ತು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಕಾಳಮ್ಮ ಜಂಟಿಯಾಗಿ ಆಧಾರಪತ್ರವನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸಾಕ್ಷಿದಾರರು ಸಹಿ ಮಾಡಿರುವುದು ನಿಜ, ನನ್ನ ಸೋದರ ಮಾವ ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎನ್ನುವರು. ನಾನು ಚನ್ನಯ್ಯ ಮತ್ತು ಕಾಳಮ್ಮ ರವರಿಗೆ ದತ್ತು ಹೋಗಿ ಅವರ ಆಸ್ತಿಯನ್ನು ಅನುಭವಿಸುತ್ತಿದ್ದು ನನ್ನ ನೈಸರ್ಗಿಕ ಕುಟುಂಬದ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಸಂಬಂಧಪಟ್ಟ ಪಡಿತರ ಚೀಟಿ ಮತ್ತು ಆಧಾರ ಕಾರ್ಡ ಇರುತ್ತದೆ. 1 ಮತ್ತು 2 ನೇ ಪ್ರತಿವಾದಿಯರಿಗೆ ಬೇರೆ ಸೈಟುಗಳಿದ್ದು ಅದನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ನನಗೆ ಸಂಬಂಧಪಟ್ಟ ಪಡಿತರ ಚೀಟಿ ಮತ್ತು ಆಧಾರಕಾರ್ಡನ್ನು ಹಾಜರುಪಡಿಸಿರುತ್ತೇನೆ. ನಾನು ಚನ್ನಯ್ಯ ಮತ್ತು ಕಾಳಮ್ಮ ರವರಿಗೆ ದತ್ತು ಹೋಗಿರುವುದರಿಂದ ನನಗೂ ಪ್ರತಿವಾದಿಯರಿಗೂ ನೈಸರ್ಗಿಕವಾಗಿ ಯಾವುದೇ ಸಂಬಂಧ ಇರುವುದಿಲ್ಲ, ಆ ಕಾರಣ ನನಗೆ ದಾವಆಸ್ತಿಯಲ್ಲಿ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದತ್ತು ಹೋಗಿರುವುದರಿಂದ ದಾವಆಸ್ತಿಯಲ್ಲಿ ಅಕ್ರಮ ಪಾಲು ಪಡೆಯಲು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.